# ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ ಮುಳಬಾಗಿಲು

## ಸಿಸಿ.ನಂ. 228/2018

| | | |
|---|---|---|
| ಹೆಸರು | : ಹೆಚ್.ಆರ್ ಆನಂದ ರೆಡ್ಡಿ | ಸಿಡಬ್ಲ್ಯೂ- 03 |
| ತಂದೆಯ ಹೆಸರು | : ರಾಮರೆಡ್ಡಿ | ಪಿ.ಡಬ್ಲ್ಯೂ-01 |
| ವಯಸ್ಸು | : 41 ವರ್ಷ | ದಿನಾಂಕಃ- 09-08-2023 ರಂದು |
| ಉದ್ಯೋಗ | : ವ್ಯವಸಾಯ | ಸಾಕ್ಷಿಯನ್ನು ಕರೆಸಿ |
| ವಾಸಸ್ಥಳ | : ಬಿ.ಹೊಸಹಳ್ಳಿ ಗ್ರಾಮ | ಪ್ರಮಾಣೀಕರಿಸಲಾಯಿತು. |

**ಮುಖ್ಯ ವಿಚಾರಣೆ ಮಾನ್ಯ ಎಪಿಪಿ ರವರಿಂದಃ**

ಚಾಸಾ 2, 4 ಮತ್ತು 5 ರವರು ನನಗೆ ಗೊತ್ತಿಲ್ಲ. ಈಗ ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಸಾಕ್ಷಿಯು ಅದರ ಪ್ರತಿ ಪುಟದಲ್ಲಿನ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು ಸದರಿ ದಾಖಲೆಯು ಪಂಚನಾಮೆಯಾಗಿದ್ದು ಅದನ್ನು ನಿ.ಪಿ 1 ಎಂದು ಅದರಲ್ಲಿನ ಸಾಕ್ಷಿಯ ಸಹಿಗಳನ್ನು ಕ್ರಮವಾಗಿ ನಿ.ಪಿ 1(ಎ) ಯಿಂದ (ಎಫ್) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ನಾನು ನಮ್ಮ ಗ್ರಾಮದಲ್ಲಿ ಮಾಡಿರುತ್ತೇನೆ. ನಿ.ಪಿ 1 ರಲ್ಲಿ ಬರೆದಿರುವ ಸಂಗತಿಗಳು ನನಗೆ ಗೊತ್ತಿಲ್ಲ. ಪೊಲೀಸರು ನನ್ನ ಸಮಕ್ಷಮ ಯಾವುದೇ ಧಾಳಿ ನಡೆಸಿರುವುದಿಲ್ಲ, ಯೂವುದೇ ಪಂಚನಾಮೆಯನ್ನು ಮಾಡಿರುವುದಿಲ್ಲ ಹಾಗೂ ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆಯನ್ನು ಕೊಟ್ಟಿರುವುದಿಲ್ಲ.

***(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಎಪಿಪಿರವರಿಗೆ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಗಿದೆ)***

**ಪಾಟೀ ಸವಾಲುಃ ಮಾನ್ಯ ಎಪಿಪಿರವರಿಂದ ಃ-**

ದಿನಾಂಕಃ 17.03.2017 ರಂದು ಚಾಸಾ 1, 6, 7 ಮತ್ತು ಚಾಸಾ 11 ರಿಂದ 16 ರವರು ಮುಳಬಾಗಿಲು ತಾಲ್ಲೂಕು ತಾಯಲೂರು ಹೋಬಳಿಯ ದೂಲಪಲ್ಲಿ ಪಂಚಾಯಿತಿ ವ್ಯಾಪ್ತಿಯಲ್ಲಿ ಸೇರಿದ

ಬಿ.ಹೊಸಹಳ್ಳಿ ಗ್ರಾಮದ ಸರ್ವೇ ನಂ. 130 ರ ಜಮೀನಿನಲ್ಲಿರುವ ಶೆಡ್‌ನ ಮೇಲೆ ಧಾಳಿ ಮಾಡಿ ಅಕ್ರಮವಾಗಿ ನಕಲಿ ಮದ್ಯವನ್ನು ಸಿದ್ಧಪಡಿಸುತ್ತಿದ್ದಾಗ ಚಾಸಾ 1 ರವರು ನನ್ನ ಮತ್ತು ಚಾಸಾ 2, 4 ರವರ ಸಮಕ್ಷಮ ಮಧ್ಯಾಹ್ನ 12.00 ಗಂಟೆಯಿಂದ 3.30 ಗಂಟೆಯವರೆಗೆ ನನ್ನ ಮತ್ತು ಇತರೇ ಪಂಚರ ಸಮಕ್ಷಮ ಪಂಚನಾಮೆ ಕ್ರಮ ಜರುಗಿಸಿ ಪಂಚನಾಮೆಯಡಿ ಈ ಕೆಳಕಂಡ ಮಾಲುಗಳಾದ 1) ಖಾಲಿ ರೆಟ್ಟಿನ ಪೆಟ್ಟಿಗೆಗಳು, 2) 06 ನೀಲಿ ಬಣ್ಣದ ಖಾಲಿ ಪ್ಲಾಸ್ಟಿಕ್ ಬ್ಯಾರೆಲ್‌ಗಳು, 3) 50 ಖಾಲಿ ಕ್ಯಾನ್‌ಗಳು (33 ಲೀ. ಸಾಮರ್ಥ್ಯ), 4) 5 ಲೀ. ಸಾಮರ್ಥ್ಯದ ಕ್ಯಾನ್‌ನಲ್ಲಿ ಕಂದು ಬಣ್ಣದ ದ್ರಾವಕ; 'ಎಂ' ಎಂಬ ಅಕ್ಷರದಿಂದ ಮೊಹರು ಮಾಡಿರುತ್ತದೆ, 5) ಒಂದು ಬಾಟೆಲ್ ಕ್ರಿಯೇಟಿವ್ ಆರೋಮ್ಯಾಟಿಕ್ಸ್ ಸ್ಪೆಷೆಲೈಸೇಷನ್ ಪ್ರೈವೇಟ್ ಲಿಮಿಟೆಡ್, 6) ಒಂದು ಗಮ್, 7) ಒಂದು ಕಪ್ಪು ಬಣ್ಣದ ಖಾಲಿ ಪ್ಲಾಸ್ಟಿಕ್ ಕವರ್ ಬಂಡಲ್, 8) ಒಂದು ನೀಲಿ ಬಣ್ಣದ ಪ್ಲಾಸ್ಟಿಕ್ ಬ್ಯಾರೆಲ್ (ಮದ್ಯದ ವಾಸನೆ ಇರುತ್ತದೆ), 9) ಒಂದು ನೀಲಿ ಬಣ್ಣದ ಪ್ಲಾಸ್ಟಿಕ್ ಬ್ಯಾರೆಲ್ (ತಳಭಾಗದಲ್ಲಿ ನಲ್ಲಿ ಇರುತ್ತದೆ), 10) ಲೇಬಲ್‌ಗಳಿರುವ ರೆಡ್ ರೋಸ್ ಫೈನ್ ಬ್ರಾಂದಿ, 11) ಒಂದು ರೆಟ್ಟಿನ ಪೆಟ್ಟಿಗೆಯಲ್ಲಿ ಮದ್ಯದ ಬಾಟೆಲ್‌ಗಳಿಗೆ ಹಾಕುವ ವೈಟ್‌ಹೌಸ್ ಮುಚ್ಚಳಗಳು, 12) ಒಂದು ಪ್ಲಾಸ್ಟಿಕ್ ಚೀಲದಲ್ಲಿ ಕಂದು ಬಣ್ಣದ ಮತ್ತು ಗೋಲ್ಡನ್ ಬಣ್ಣದ ಮುಚ್ಚಳಗಳಿರುತ್ತವೆ, 13) 48 ಮದ್ಯದ ಬಾಟೆಲ್‌ಗಳಿದ್ದು ಗ್ರೀನ್ ಮ್ಯಾಜಿಕ್ ಬ್ರಾಂದಿಯಾಗಿರುತ್ತದೆ (ಇವುಗಳ ಪೈಕಿ 10 ಬಾಟೆಲ್‌ಗಳನ್ನು ಎಫ್.ಎಸ್.ಎಲ್ ತಜ್ಞರಿಗೆ ಕಳುಹಿಸಲು 'ಎಂ' ಅಕ್ಷರದಿಂದ ಮೊಹರು ಮಾಡಿರುತ್ತದೆ), 14) ಬಾಟೆಲ್‌ಗಳಿಗೆ ಮುಚ್ಚಳಗಳನ್ನು ತ್ರೆಡಿಂಗ್ ಮಾಡುವ ಒಂದು ಯಂತ್ರ, 15) 36 ಪ್ಲಾಸ್ಟಿಕ್ ಕ್ಯಾನ್‌ಗಳು (33 ಲೀ. ಸಾಮರ್ಥ್ಯದ ಸ್ಪಿರಿಟ್ ತುಂಬಿರುತ್ತದೆ), 16) 36 ಸ್ಪಿರಿಟ್ ಕ್ಯಾನಗಳಿಂದ 36 ಬಾಟೆಲ್‌ಗಳಲ್ಲಿ ತೆಗೆದಿರುವ ಸ್ಪಿರಿಟ್‌ನ್ನು 'ಎಂ' ಅಕ್ಷರದಿಂದ ಮೊಹರು ಮಾಡಿರುತ್ತದೆ), 17) 110 ಪ್ಲಾಸ್ಟಿಕ್ ಕವರ್‌ಗಳಲ್ಲಿದ್ದ 1,320 ಮದ್ಯದ ಬಾಟಲಿಗಳಿದ್ದು ಗೋಲ್ಕಂಡ ಬ್ರಾಂದಿಯಾಗಿರುತ್ತದೆ, 18) 10 ಗೋಲ್ಕಂಡ ಬ್ರಾಂದಿ ಬಾಟಲ್‌ಗಳನ್ನು ಮಾದರಿಗಾಗಿ ತೆಗೆದಿರುತ್ತದೆ, 19) 40 ರೆಟ್ಟಿನ ಬಾಕ್ಸ್‌ಗಳು

(ಪ್ರತಿ ಬಾಕ್ಸಿನಲ್ಲಿ 100 ಖಾಲಿ ಬಾಟೆಲ್‌ಗಳು ಇರುತ್ತವೆ), 20) 40 ನೀರಿನ ಕ್ಯಾನ್‌ಗಳು, 21) ರೆಟ್ಟಿನ ಪೆಟ್ಟಿಗೆಯಲ್ಲಿ ಗ್ರೀನ್ ಬ್ರಾಂದಿ ರಾಜ್‌ಕುಮಾರ್ ಡಿಸ್ಟಿಲರಿಸ್ ಲಿಮಿಟೆಡ್, ಪಾಂಡಿಚೇರಿ, 22) ರೆಟ್ಟಿನ ಪೆಟ್ಟಿಗೆಯಲ್ಲಿ ಗೋಲ್ಕಂಡ ಬ್ರಾಂದಿ ಫಾರ್ ಡಿಫೆನ್ಸ್ ಸರ್ವೀಸ್ ಕ್ಯಾಂಟಿನ್ ಎಂಬುದಾಗಿರುತ್ತದೆ, 23) ಮದ್ಯದ ತೀಕ್ಷಣತೆ ತೋರಿಸುವ ಒಂದು ಆಲ್ಕೋ ಮೀಟರ್, ಪ್ಲಾಸ್ಟಿಕ್ ಜಾರ್ ಇದ್ದು ಅಂದಾಜು ಮೌಲ್ಯ 10,00,000/- ಬೆಲೆ ಬಾಳುವ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡು, ನಿ.ಪಿ 1 ಕ್ಕೆ ನನ್ನ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಈ ಮೇಲಿನಂತೆ ಪೊಲೀಸರಿಗೆ ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಈ ಮೇಲಿನ ಹೇಳಿಕೆಯನ್ನು ಸಂಪೂರ್ಣವಾಗಿ ನಿರಾಕರಿಸಿದ್ದು, ಸಾಕ್ಷಿಯ ಹೇಳಿಕೆಯನ್ನು ನಿ.ಪಿ 2 ಎಂದು ಗುರುತಿಸಲಾಯಿತು. ನಾನು ಆರೋಪಿತರೊಂದಿಗೆ ರಾಜಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಿ.ಪಿ 1 ಮತ್ತು 2 ರಲ್ಲಿ ಬರೆದಿರುವ ಎಲ್ಲಾ ವಿಚಾರಗಳು ತಿಳಿದಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಕೆ.ಎನ್.ಆರ್ ವಕೀಲರಿಂದಃ-**

ಇಲ್ಲ ಎಂದು ತಿಳಿಸಿರುತ್ತಾರೆ.

**ಮರುವಿಚಾರಣೆಃ** ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸರಿ ಇದೆ.

(ಈಶ್ವರ)
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ ಮುಳಬಾಗಿಲು.